(1)

2+4

# ಕರ್ನಾಟಕ ಸರ್ಕಾರ

RPAD

ಸಂಖ್ಯೆ: ಸಿಆಸುಇ 86 ಪಿಎಫ್‌ಜಿ 2012
ಆಡಳಿತ-1

ಕರ್ನಾಟಕ ಸರ್ಕಾರದ ಸಚಿವಾಲಯ,
6ನೇ ಮಹಡಿ, 1ನೇ ಹಂತ,
ಬಹುಮಹಡಿ ಕಟ್ಟಡ, ಬೆಂಗಳೂರು-1,
ದಿನಾಂಕ:18.09.2013

## ಸುತ್ತೋಲೆ

ವಿಷಯ: ರಾಜ್ಯ ಸ್ವಾತಂತ್ರ್ಯ ಯೋಧರ ಗೌರವಧನ ಪಡೆಯುತ್ತಿದ್ದ ಸ್ವಾತಂತ್ರ್ಯ ಯೋಧರು ನಿಧನ ಹೊಂದಿದ ನಂತರ ಅವರ ವಿಧವೆಯವರಿಗೆ ಕುಟುಂಬ ಗೌರವಧನವನ್ನು ಮಂಜೂರು ಮಾಡುವ ಸಲುವಾಗಿ ಕಾಲಕಾಲಕ್ಕೆ ನೀಡಲಾಗಿರುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಬಗ್ಗೆ.

ಉಲ್ಲೇಖ:
1) ದಿನಾಂಕ:12.06.1978ರ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 67 ಪಿಎಫ್‌ಎಸ್ 1978.
2) ದಿನಾಂಕ:02/06/1981 ರಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಬರೆದಿರುವ ಸರ್ಕಾರದ ಪತ್ರ ಸಂಖ್ಯೆ:ಸಿಆಸುಇ 67 ಪಿಎಫ್‌ಎಸ್ 1978.
3) ದಿನಾಂಕ:01.07.1981ರ ಸರ್ಕಾರದ ಆದೇಶದ ಸಂಖ್ಯೆ:ಸಿಆಸುಇ 546 ಪಿಎಫ್‌ಎಸ್ 1979.
4) ದಿನಾಂಕ:08.06.1984ರ ಸರ್ಕಾರದ ಆದೇಶದ ಸಂಖ್ಯೆ:ಸಿಆಸುಇ 355 ಪಿಎಫ್‌ಎಸ್ 1984.
5) ದಿನಾಂಕ:24.03.1988 ರಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಬರೆದಿರುವ ಸರ್ಕಾರದ ಪತ್ರ ಸಂಖ್ಯೆ:ಸಿಆಸುಇ 1110 ಪಿಎಫ್‌ಎಸ್ 87.
6) ದಿನಾಂಕ:25.05.1998ರ ಸರ್ಕಾರದ ಸುತ್ತೋಲೆಯ ಸಂಖ್ಯೆ: ಸಿಆಸುಇ 52 ಪಿಎಫ್‌ಜಿ 98.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯ ಸ್ವಾತಂತ್ರ್ಯ ಯೋಧರ ಗೌರವಧನ ಪಡೆಯುತ್ತಿದ್ದ ಸ್ವಾತಂತ್ರ್ಯ ಯೋಧರು ನಿಧನ ಹೊಂದಿದ್ದಲ್ಲಿ ಅವರ ವಿಧವೆಯವರಿಗೆ ಕುಟುಂಬ ಗೌರವಧನವನ್ನು ಮಂಜೂರು ಮಾಡುವ ಸಲುವಾಗಿ ಉಲ್ಲೇಖ(1)ರಿಂದ (6)ರವರೆಗಿನ ಸರ್ಕಾರದ ಸುತ್ತೋಲೆ/ಆದೇಶ/ಪತ್ರಗಳಲ್ಲಿ ಕಾಲಕಾಲಕ್ಕೆ ನೀಡಲಾಗಿರುವ ಸೂಚನೆಗಳ ಪ್ರತಿಯನ್ನು ಇದರೊಂದಿಗೆ ಲಗತ್ತಿಸುತ್ತಾ, ಸದರಿ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳು/ಜಿಲ್ಲಾ ಖಜಾನೆಗಳಿಗೆ ಈ ಮೂಲಕ ಕೋರಲಾಗಿದೆ, ಹಾಗೂ ಇಂತಹ ಪ್ರಕರಣಗಳಲ್ಲಿ ಕೆಳಕಂಡ ಅಂಶಗಳ ಬಗ್ಗೆ ಕ್ರಮ ಜರುಗಿಸುವಂತೆ ಕೋರಲಾಗಿದೆ.

1) ರಾಜ್ಯ ಸ್ವಾತಂತ್ರ್ಯ ಯೋಧರ ಗೌರವಧನ ಪಡೆಯುತ್ತಿರುವ ಅರ್ಜಿದಾರರು ಹಾಗೊಮ್ಮೆ ಅವರ ಪತ್ನಿ/ ಪತಿಯವರ ಹೆಸರನ್ನು ಪಿಪಿಓ ಪುಸ್ತಕದಲ್ಲಿ ನಾಮನಿರ್ದೇಶನ ಮಾಡಿಸಿಕೊಳ್ಳದೇ ಇದ್ದಲ್ಲಿ, ಇಂತಹ ಅರ್ಜಿದಾರರ ಪ್ರಕರಣಗಳ ಬಗ್ಗೆ ಕೆಳಕಂಡಂತೆ ಕ್ರಮ ಜರುಗಿಸಬೇಕು.

(i) ಇಂತಹ ಸ್ವಾತಂತ್ರ್ಯ ಯೋಧರು ತಮ್ಮ ಪತ್ನಿ/ಪತಿ ಹಾಗೂ ಅಪ್ರಾಪ್ತ ವಯಸ್ಸಿನ ಗಂಡು ಮಕ್ಕಳು /ಅಪ್ರಾಪ್ತ ವಯಸ್ಸಿನ ಅವಿವಾಹಿತ ಹೆಣ್ಣು ಮಕ್ಕಳು ಹಾಗೂ ಇವರು ವಯಸ್ಸಿನ ಬಗ್ಗೆ ಮಾಹಿತಿಯನ್ನು ಒಳಗೊಂಡಿರುವ Affidavit ಹಾಗೂ ಇದರ ಜೊತೆ ತಹಶೀಲ್ದಾರ್ ರವರಿಂದ ಪಡೆದಿರುವ ಅವರ ಕುಟುಂಬದ

45



ಜೀವಂತ ಸದಸ್ಯರ ಪ್ರಮಾಣ ಪತ್ರವನ್ನು ಮಹಾಲೇಖಪಾಲರಿಗೆ ಸಲ್ಲಿಸಿ, ಅದರ ಪ್ರತಿಯನ್ನು ಸರ್ಕಾರಕ್ಕೆ/ ಜಿಲ್ಲಾಧಿಕಾರಿಯವರಿಗೆ ಸಲ್ಲಿಸಬೇಕು.

(ii) ಈ ಬಗ್ಗೆ ಸ್ವಾತಂತ್ರ್ಯ ಯೋಧರಿಂದ ಅವರ ಕುಟುಂಬದ ಜೀವಂತ ಸದಸ್ಯರ ಪ್ರಮಾಣ ಪತ್ರ ಹಾಗೂ **Affidavit** ಅನ್ನು ಸ್ವೀಕರಿಸಲಾದ ನಂತರ, ಸ್ವಾತಂತ್ರ್ಯ ಯೋಧರ ಕೋರಿಕೆಯ ಪ್ರಕಾರ ಅವರ ಪತಿ/ಪತ್ನಿ ಯವರ ಹೆಸರನ್ನು **Pension Payment Order** ರಲ್ಲಿನ **bothhalves** ನಲ್ಲಿ (ಉಭಯ ಭಾಗದಲ್ಲಿ) ನಮೂದಿಸಲು ಹಾಗೂ ಸ್ವಾತಂತ್ರ್ಯ ಯೋಧರು ನಿಧನ ಹೊಂದಿದ್ದಲ್ಲಿ, ಅವರ ವಿಧವಾ ಪತ್ನಿ/ ಪತಿಯವರಿಗೆ ರಾಜ್ಯ ಸ್ವಾತಂತ್ರ್ಯ ಯೋಧರ ಕುಟುಂಬ ಗೌರವಧನ ಪಾವತಿಸುವ ಬಗ್ಗೆ ಮಹಾಲೇಖಪಾಲರು/ ಆಯಾ ಜಿಲ್ಲಾ ಖಜಾನಾಧಿಕಾರಿಗಳಿಗೆ ಸೂಕ್ತ ಸೂಚನೆ ನೀಡಬೇಕಾಗುತ್ತದೆ.

2) **PPO** ಪುಸ್ತಕದಲ್ಲಿ ಗೌರವಧನ ಪಡೆಯುತ್ತಿದ್ದ ಸ್ವಾತಂತ್ರ್ಯ ಯೋಧರು, ತಮ್ಮ **PPO** ಪುಸ್ತಕದಲ್ಲಿ ಅವರ ಪತ್ನಿ/ಪತಿಯವರ ಹೆಸರು ನಾಮನಿರ್ದೇಶನ ಮಾಡಿಸಲಾಗಿದ್ದು, ಹಾಗೂ ಗೌರವಧನ ಪಡೆಯುತ್ತಿದ್ದ ಸ್ವಾತಂತ್ರ್ಯ ಯೋಧರು ನಿಧನ ಹೊಂದಿದ ನಂತರ, ಅವರ ವಿಧವೆಯರಿಗೆ ಕುಟುಂಬ ಗೌರವಧನವನ್ನು ಸ್ವಯಂಚಾಲಿತವಾಗಿ **(Automatically)** ಮಂಜೂರು ಮಾಡುವ ಸಲುವಾಗಿ ಅರ್ಜಿಗಳನ್ನು ನೇರವಾಗಿ ಆಯಾ ಜಿಲ್ಲೆಯ ಜಿಲ್ಲಾ ಖಜಾನಾಧಿಕಾರಿಯವರಿಗೆ ಸಲ್ಲಿಸಬೇಕಾಗುತ್ತದೆ. ಅಲ್ಲದೆ, ಈ ಸಂಬಂಧ ಸ್ವೀಕರಿಸಲಾಗುವ ಅರ್ಜಿಗಳನ್ನು ಪರಿಶೀಲಿಸುವ ಸಮಯದಲ್ಲಿ ಕೆಳಕಂಡ ಅಂಶಗಳ ಬಗ್ಗೆ ಜಿಲ್ಲಾ ಖಜಾನಾಧಿಕಾರಿಗಳು ಪರಿಶೀಲಿಸಿ ಕ್ರಮ ಜರುಗಿಸಬೇಕು.

(i) ನಿಧನ ಹೊಂದಿರುವ ಸ್ವಾತಂತ್ರ್ಯ ಯೋಧರ ಪತ್ನಿ/ಪತಿಯವರ ಹೆಸರು ಮೂಲ ಪಿಪಿಓ ಪುಸ್ತಕದಲ್ಲಿ ನಾಮ ನಿರ್ದೇಶನ ಮಾಡಲಾಗಿದೆಯೇ? ಎಂಬುದರ ಬಗ್ಗೆ ಜಿಲ್ಲಾ ಖಜಾನಾಧಿಕಾರಿಗಳು ಮೊದಲು ಖಚಿತಪಡಿಸಿಕೊಳ್ಳಬೇಕು. ಈ ಬಗ್ಗೆ ಸಂಶಯ ಉಂಟಾಗಿದ್ದಲ್ಲಿ, ಜಿಲ್ಲಾ ಖಜಾನಾಧಿಕಾರಿಗಳು ಈ ಬಗ್ಗೆ ಮಹಾ ಲೇಖಪಾಲರೊಂದಿಗೆ ಸಮಾಲೋಚಿಸಿ ಸ್ಪಷ್ಟೀಕರಣ ಪಡೆಯಬೇಕು.

(ii) ಸ್ವಾತಂತ್ರ್ಯ ಯೋಧರು ನಿಧನ ಹೊಂದಿರುವ ಬಗ್ಗೆ ಅವರ ಮರಣ ಪ್ರಮಾಣ ಪತ್ರ ಹಾಗೂ ಅವರ ವಿಧವೆಯರ ಇತ್ತೀಚಿನ ಕುಟುಂಬದ ಜೀವಂತ ಸದಸ್ಯರ ಮೂಲ ಪ್ರಮಾಣ ಪತ್ರವನ್ನು ತಹಶೀಲ್ದಾರ್‌ರವರಿಂದ ಪಡೆದು ಅರ್ಜಿದಾರರು ಜಿಲ್ಲಾ ಖಜಾನಾಧಿಕಾರಿಯವರಿಗೆ ಸಲ್ಲಿಸಬೇಕು.

(iii) ಇದರ ಜೊತೆಗೆ ಪತ್ರಾಂಕಿತ ಅಧಿಕಾರಿಯವರಿಂದ ದೃಢೀಕರಿಸಲಾದ ಅರ್ಜಿದಾರರ 03 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು/03 ಮಾದರಿ ಸಹಿಗಳು /03 ಹೆಬ್ಬೆಟ್ಟಿನ ಗುರುತು/ಹಾಗೂ ಅರ್ಜಿದಾರರ ಗುರುತಿನ ಚಿಹ್ನೆಯ ಬಗ್ಗೆ ಸರ್ಕಾರದ ವೈದ್ಯಾಧಿಕಾರಿಯವರಿಂದ ಪಡೆದಿರುವ ಪ್ರಮಾಣ ಪತ್ರವನ್ನು ಜಿಲ್ಲಾ ಖಜಾನಾಧಿಕಾರಿಯವರಿಗೆ ಅರ್ಜಿದಾರರು ಸಲ್ಲಿಸಬೇಕು.

3

(iv) ಮೇಲಿನ ಕಂಡಿಕೆ (i) ಮತ್ತು (ii) ಮತ್ತು (iii) ರಲ್ಲಿನ ದಾಖಲೆಗಳ ಪ್ರಕಾರ ನಿಧನ ಹೊಂದಿರುವ ಸ್ವಾತಂತ್ರ್ಯ ಯೋಧರು ಜೀವಂತವಾಗಿದ್ದ ಅವಧಿಯಲ್ಲಿ ಅವರು ತಮ್ಮ PPO ಪುಸ್ತಕದಲ್ಲಿ ಅವರ ಪತ್ನಿಯವರ ಹೆಸರು ನಾಮನಿರ್ದೇಶನ ಮಾಡಿಸಲಾಗಿದ್ದ ಪ್ರಕರಣಗಳಲ್ಲಿ ಮಾತ್ರ ಸ್ವಾತಂತ್ರ್ಯ ಯೋಧರ ವಿಧವೆಯರು ಸ್ವಯಂಚಾಲಿತವಾಗಿ (Automatically) ಸ್ವಾತಂತ್ರ್ಯ ಯೋಧರು ನಿಧನ ಹೊಂದಿರುವ ದಿನಾಂಕದ ಮಾರನೆಯ ದಿನದಿಂದ ಜಾರಿಗೆ ಬರುವಂತೆ ಜಿಲ್ಲಾ ಖಜಾನೆಯ ವತಿಯಿಂದ ರಾಜ್ಯ ಸ್ವಾತಂತ್ರ್ಯ ಯೋಧರ ಕುಟುಂಬ ಗೌರವಧನ ಪಡೆಯಲು ಅರ್ಹರಾಗಿರುತ್ತಾರೆ. ಅದರಂತೆಯೇ, ಇಂತಹ ಪ್ರಕರಣದಲ್ಲಿ ಜಿಲ್ಲಾ ಖಜಾನೆಯ ವತಿಯಿಂದ ಸ್ವಾತಂತ್ರ್ಯ ಯೋಧರ ವಿಧವೆಯವರಿಗೆ ರಾಜ್ಯ ಸ್ವಾತಂತ್ರ್ಯ ಯೋಧರ ಕುಟುಂಬ ಗೌರವಧನವನ್ನು ಮಂಜೂರು ಮಾಡಿ ಜಿಲ್ಲಾ ಖಜಾನಾಧಿಕಾರಿಗಳು ಸದರಿ ಆದೇಶದ ಪ್ರತಿಯನ್ನು ಮಾಹಿತಿಗಾಗಿ ಮಹಾಲೇಖಪಾಲರು ಹಾಗೂ ಜಿಲ್ಲಾಧಿಕಾರಿಯವರಿಗೆ/ ಸರ್ಕಾರಕ್ಕೆ ಜರೂರಾಗಿ ಕಳುಹಿಸಬೇಕು

3) ಅಲ್ಲದೆ, ರಾಜ್ಯ ಸ್ವಾತಂತ್ರ್ಯ ಯೋಧರ ಗೌರವಧನ ಪಡೆಯುತ್ತಿದ್ದ ಅರ್ಜಿದಾರರು ಅವರ ಜೀವಂತದ ಅವಧಿಯಲ್ಲಿ ಅವರ ಪತ್ನಿ/ ಪತಿಯವರ ಹೆಸರನ್ನು ಪಿಪಿಓ ಪುಸ್ತಕದಲ್ಲಿ ನಾಮನಿರ್ದೇಶನ ಮಾಡಿಸಿಕೊಳ್ಳದೆ, ನಿಧನ ಹೊಂದಿದ್ದ ಸಂಧರ್ಭದಲ್ಲಿ, ಅವರ ವಿಧವಾ ಪತ್ನಿ/ ಪತಿಯವರಿಗೆ ಕುಟುಂಬ ಗೌರವಧನ ಮಂಜೂರು ಮಾಡುವ ಸಲುವಾಗಿ ದಿನಾಂಕ:12.06.1978ರ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 67 ಪಿಎಫ್ಎಸ್ 78 ರಲ್ಲಿ ನೀಡಲಾಗಿರುವ ಸೂಚನೆಗಳ ಪ್ರಕಾರ ಅರ್ಜಿದಾರರು ಕೆಳಕಂಡ ಅಗತ್ಯ ದಾಖಲೆಗಳನ್ನು ಜಿಲ್ಲಾಧಿಕಾರಿಯವರಿಗೆ ಸಲ್ಲಿಸಬೇಕಾಗುತ್ತದೆ.

(i) ರಾಜ್ಯ ಸ್ವಾತಂತ್ರ್ಯ ಯೋಧರ ಕುಟುಂಬ ಗೌರವಧನ ಮಂಜೂರಾತಿಗಾಗಿ ಆಯಾ ಜಿಲ್ಲಾಧಿಕಾರಿಯವರಿಗೆ ಅರ್ಜಿಯನ್ನು ಸಲ್ಲಿಸಬೇಕು. ಅಲ್ಲದೆ, ಅರ್ಜಿದಾರರು ಸಲ್ಲಿಸುವಂತಹ ಅರ್ಜಿಯಲ್ಲಿ, ಸದರಿ ಅರ್ಜಿಯನ್ನು ಸಲ್ಲಿಸಿದ್ದ ದಿನಾಂಕವನ್ನು ಕಡ್ಡಾಯವಾಗಿ ನಮೂದಿಸಬೇಕು. ಹಾಗೂ ಪತ್ರಾಂಕಿತ ಅಧಿಕಾರಿಯವರಿಂದ ಧೃಡೀಕರಿಸಿದ 03 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳನ್ನು/03 ಮಾದರಿ ಸಹಿಗಳು /03 ಹೆಬ್ಬೆಟ್ಟಿನ ಗುರುತು ಹಾಗೂ ಅರ್ಜಿದಾರರು ಗುರುತಿನ ಚಿಹ್ನೆಯ ಬಗ್ಗೆ ಸರ್ಕಾರದ ವೈದ್ಯಾಧಿಕಾರಿಯವರಿಂದ ಪಡೆದಿರುವ ಪ್ರಮಾಣ ಪತ್ರವನ್ನು ಸದರಿ ಅರ್ಜಿಯ ಜೊತೆಯಲ್ಲಿ ಅರ್ಜಿದಾರರು ಲಗತ್ತಿಸಬೇಕು.

(ii) ಹಿಂದೆ, ಸ್ವಾತಂತ್ರ್ಯ ಯೋಧರಿಗೆ ರಾಜ್ಯ ಸ್ವಾತಂತ್ರ್ಯ ಯೋಧರ ಗೌರವಧನ ಮಂಜೂರಾದ ಸರ್ಕಾರದ ಆದೇಶದ ಧೃಢೀಕೃತ ಜೆರಾಕ್ಸ್ ಪ್ರತಿ.

(iii) ಮಹಾಲೇಖಪಾಲರ ಕಛೇರಿಯ ವತಿಯಿಂದ ನೀಡಲಾಗಿರುವ PPO ಪುಸ್ತಕದ ಧೃಢೀಕೃತ ಜೆರಾಕ್ಸ್ ಪ್ರತಿ (ಅದರ ಮೂಲ ಪ್ರತಿ ಜಿಲ್ಲಾ ಖಜಾನಾಧಿಕಾರಿ/ಜಿಲ್ಲಾಧಿಕಾರಿಯವರಿಗೆ ತೋರಿಸಬೇಕು).

147



(iv) ಗೌರವಧನ ಪಡೆಯುತ್ತಿದ್ದ ಸ್ವಾತಂತ್ರ್ಯ ಯೋಧರು ನಿಧನ ಹೊಂದಿರುವ ಬಗ್ಗೆ ತಹಶೀಲ್ದಾರ್‌ರವರಿಂದ ಪಡೆದಿರುವ ಮರಣ ಪ್ರಮಾಣ ಪತ್ರ

(v) ನಿಧನ ಹೊಂದಿರುವ ಸ್ವಾತಂತ್ರ್ಯ ಯೋಧರ ಕುಟುಂಬದ ಜೀವಂತ ಸದಸ್ಯರ ಬಗ್ಗೆ ತಹಶೀಲ್ದಾರ್‌ರವರಿಂದ ಪಡೆದಿರುವ ಪ್ರಮಾಣ ಪತ್ರ (ಎಲ್ಲಾ ಸದಸ್ಯರ ವಯಸ್ಸು ನಮೂದಿಸಬೇಕು).

(vi) ನಿಧನ ಹೊಂದಿರುವ ರಾಜ್ಯ ಸ್ವಾತಂತ್ರ್ಯ ಯೋಧರ ಪತ್ನಿ/ ಪತಿಯವರು ತಮಗೆ ಕುಟುಂಬ ಗೌರವಧನ ಮಂಜೂರಾತಿಯ ಸಲುವಾಗಿ ನೋಟರಿರವರ ಮುಂದೆ ಪ್ರಮಾಣೀಕರಿಸಿರುವ ಹೇಳಿಕೆ, ಹಾಗೂ ಕುಟುಂಬ ಗೌರವಧನ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಲು ವಿಳಂಬವಾಗಿರುವ ಬಗ್ಗೆ ಸೂಕ್ತ ಕಾರಣಗಳನ್ನು ನಮೂದಿಸಿ, ನೋಟರಿರವರ ಮುಂದೆ ಪ್ರಮಾಣೀಕರಿಸಿರುವ ಮೂಲ ಅಫಿಡವಿಟ್ ಅನ್ನು ಅರ್ಜಿದಾರರು ಸಲ್ಲಿಸಬೇಕು.

4) ಅಲ್ಲದೆ, ಮೇಲೆ ನಮೂದಿಸಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾದ ನಂತರ ಇಂತಹ ಪ್ರಕರಣಗಳಲ್ಲಿ ಅರ್ಜಿದಾರರಿಗೆ ರಾಜ್ಯ ಸ್ವಾತಂತ್ರ್ಯ ಯೋಧರ ಕುಟುಂಬ ಗೌರವಧನ ಮಂಜೂರು ಮಾಡುವ ಸಲುವಾಗಿ ಹೊರಡಿಸಲಾಗುವ ಆದೇಶದಲ್ಲಿ ಕೆಳಕಂಡ ಅಂಶಗಳ ಬಗ್ಗೆ ಮಾಹಿತಿಯನ್ನು ಜಿಲ್ಲಾಧಿಕಾರಿಗಳು ಜರೂರಾಗಿ ಅವರ ಕಛೇರಿಯ ಆದೇಶದಲ್ಲಿ ನಮೂದಿಸಬೇಕು.

(i) ನಿಧನ ಹೊಂದಿರುವ ಸ್ವಾತಂತ್ರ್ಯ ಯೋಧರಿಗೆ, ಹಿಂದೆ ರಾಜ್ಯ ಸ್ವಾತಂತ್ರ್ಯ ಯೋಧರ ಗೌರವಧನ ಮಂಜೂರಾದ ಆದೇಶ ಸಂಖ್ಯೆ ಮತ್ತು ದಿನಾಂಕ.

(ii) ಸ್ವಾತಂತ್ರ್ಯ ಯೋಧರು ನಿಧನ ಹೊಂದಿದ ದಿನಾಂಕ.

(iii) ನಿಧನ ಹೊಂದಿರುವ ಸ್ವಾತಂತ್ರ್ಯ ಯೋಧರಿಗೆ ಗೌರವಧನ್ನು ಪಡೆಯುವ ಸಲುವಾಗಿ ಮಹಾಲೇಖಪಾಲರ ಕಛೇರಿಯಿಂದ ನೀಡಲಾಗಿರುವ **Pension Payment Order** ರ ಸಂಖ್ಯೆ, ದಿನಾಂಕ ಹಾಗೂ ಅವರು ಯಾವ ಜಿಲ್ಲಾ ಖಜಾನೆ/ಬ್ಯಾಂಕಿನಿಂದ ಗೌರವಧನ ಪಡೆಯುತ್ತಿದ್ದರು.

(iv) ಸ್ವಾತಂತ್ರ್ಯ ಯೋಧರ ಕುಟುಂಬ ಗೌರವಧನ್ನ ಮಂಜೂರಾತಿಗಾಗಿ ಅವರ ವಿಧವಾ ಪತ್ನಿ/ಪತಿಯವರು ಜಿಲ್ಲಾಧಿಕಾರಿಯವರಿಗೆ ಅರ್ಜಿಯನ್ನು ಸಲ್ಲಿಸಿದ್ದ ದಿನಾಂಕ.

(v) ಅಲ್ಲದೆ, ಇಂತಹ ಪ್ರಕರಣಗಳಲ್ಲಿ ಅರ್ಜಿದಾರರು ಕುಟುಂಬ ಗೌರವಧನ ಪಡೆಯಲು ಅರ್ಹರಾಗಿದ್ದಲ್ಲಿ, ಹಾಗೂ ಈ ಸಂಬಂಧ ಸದರಿ ರಾಜ್ಯ ಸ್ವಾತಂತ್ರ್ಯ ಯೋಧರ ಕುಟುಂಬ ಗೌರವಧನ ಮಂಜೂರಾತಿಗಾಗಿ ಅರ್ಜಿಯನ್ನು ಆಯಾ ತಿಂಗಳಿನ 15ನೇ ತಾರೀಖಿನೊಳಗೆ ಸಲ್ಲಿಸಲಾಗಿದೆಯೇ ? ಅಥವಾ 15ನೇ ತಾರೀಖಿನ ನಂತರ

ಸಲ್ಲಿಸಿದ್ದಾರೆಯೇ? ಎಂಬುದನ್ನು ಪರಿಶೀಲಿಸಿ, ಅದರಂತೆಯೇ, ಅರ್ಜಿಯನ್ನು ಆಯಾ ತಿಂಗಳಿನ 15ನೇ ತಾರೀಖಿನೊಳಗೆ ಸಲ್ಲಿಸಿದ್ದಲ್ಲಿ, ಕುಟುಂಬ ಗೌರವಧನವನ್ನು ಆಯಾ ತಿಂಗಳಿನ 15ನೇ ತಾರೀಖಿನಿಂದ ಅಥವಾ ಅರ್ಜಿಯನ್ನು ಆಯಾ ತಿಂಗಳ 15ನೇ ತಾರಿಖಿನ ನಂತರ ಸಲ್ಲಿಸಿದ್ದಲ್ಲಿ, ಅಂತಹ ಪ್ರಕರಣಗಳಲ್ಲಿ ಮುಂದಿನ ತಿಂಗಳಿನ 1ನೇ ತಾರೀಖಿನಿಂದ ಜಾರಿಗೆ ಬರುವಂತೆ ಸದರಿ ಕುಟುಂಬ ಗೌರವಧನವನ್ನು ಮಂಜೂರು ಮಾಡಲು ಸೂಕ್ತ ಆದೇಶವನ್ನು ಜಿಲ್ಲಾಧಿಕಾರಿಯವರು ಹೊರಡಿಸಬೇಕು:

ಅಲ್ಲದೆ, ಅರ್ಜಿದಾರರಿಗೆ ಕಾಲಕಾಲಕ್ಕೆ ನಿಯಮಾನುಸಾರ ಮಂಜೂರು ಮಾಡಬಹುದಾದ ಕುಟುಂಬ ಗೌರವಧನದ ಮೊತ್ತದ ವಿವರಗಳನ್ನು ಸಹ ಜಿಲ್ಲಾಧಿಕಾರಿಯವರ ಆದೇಶದಲ್ಲಿ ನಮೂದಿಸಬೇಕು(ಈ ಸಂಬಂಧ ಪೂರ್ವಭಾವಿಯಾಗಿ ಜಿಲ್ಲಾ ಖಜಾನೆಯಿಂದ ಮಾಹಿತಿ ಪಡೆದುಕೊಂಡು, ನಂತರ ಜಿಲ್ಲಾಧಿಕಾರಿಯವರು ಆದೇಶ ಹೊರಡಿಸಬೇಕು).

ಅಲ್ಲದೆ, 1969 ರ ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಯೋಧರ ಕಲ್ಯಾಣ ನಿಯಮಗಳ ನಿಯಮ 6(iv)ರನ್ವಯ ಗಂಡು ಮಕ್ಕಳು 21 ವರ್ಷ ವಯಸ್ಸಿನವರೆಗೆ ಹಾಗೂ ನಿಯಮ 6(v) ರನ್ವಯ ಹೆಣ್ಣು ಮಕ್ಕಳು 21 ವರ್ಷ ವಯಸ್ಸಿನವರಿಗೆ ಅಥವಾ ಅವರು ಮದುವೆಯಾಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಸ್ವಾತಂತ್ರ್ಯ ಹೋರಾಟಗಾರರ ರಾಜ್ಯ ಕುಟುಂಬ ಗೌರವಧನವನ್ನು ಪಡೆಯಲು ಅರ್ಹರಾಗಿರುತ್ತಾರೆ.

ಮೇಲಿನ ಸೂಚನೆಗಳನ್ನು ಪ್ರತ್ಯೇಕವಾಗಿ ಜಿಲ್ಲಾಧಿಕಾರಿಯವರ ಹಾಗೂ ಜಿಲ್ಲಾ ಖಜಾನಾಧಿಕಾರಿಯವರ ಅಧೀನದಲ್ಲಿ ಬರುವ ಎಲ್ಲಾ ಅಧಿಕಾರಿಗಳ ಗಮನಕ್ಕೆ ತರುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ,

18/9/2013

(ಅಬ್ದುಲ್ ರೆಹಮಾನ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು.ಇ.(ಆಸು–ರಾಜಕೀಯ ವಿಶ್ರಾಂತಿ ವೇತನ–1)
ದೂ: 080–22032393

ಪ್ರತಿ ಇವರಿಗೆ:-

1) ಎಲ್ಲಾ ಜಿಲ್ಲಾಧಿಕಾರಿಗಳು.
2) ಎಲ್ಲಾ ಜಿಲ್ಲೆಯ ಜಿಲ್ಲಾ ಖಜಾಧಿಕಾರಿಗಳು,

ಪ್ರತಿ ಮಾಹಿತಿಗಾಗಿ :-

ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.